**ಪಿ.ಡಬ್ಲ್ಯೂ ಃ 1**

**ಸಾಕ್ಷಿಗೆ ದಿನಾಂಕಃ 23.01.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2ನೇ ಎದುರುದಾರರ ಪರ ಶ್ರೀ ವಕೀಲರಿಂದಃ**

ನನ್ನ ಪತಿಗೆ ಚಾಲನಾ ಪರವಾನಿಗೆ ಇತ್ತು. ಅಪಘಾತವನ್ನು ನಾನು ಪ್ರತ್ಯೇಕ್ಷವಾಗಿ ನೋಡಿರುವುದಿಲ್ಲ. ನನ್ನ ಮಾವನು ಅಪಘಾತಕ್ಕೆ ಸಂಬಂಧಿಸಿದಂತೆ ದೂರನ್ನು ನೀಡಿರುತ್ತಾರೆ. ನನ್ನ ಮಾವನು ಅಪಘಾತವಾದಗ ಮನೆಯಲ್ಲಿ ಇದ್ದು, ಅಪಘಾತವನ್ನು ನೋಡಿಲ್ಲ ಎಂದರೆ ಸರಿ. ನನಗೆ ಟ್ರಾಕ್ಟರ್ ಚಾಲಕ ಮತ್ತು ಮಾಲೀಕರ ಪರಿಚಯವಿರುವುದಿಲ್ಲ. ಟ್ರಾಕ್ಟರ್ ಹಿಂಭಾಗಕ್ಕೆ ನನ್ನ ಪತಿಯ ಬೈಕು ಡಿಕ್ಕಿಪಡಿಸಿರುತ್ತದೆ ಎಂದರೆ ಸರಿ. ಟ್ರಾಕ್ಟರ್ ವೇಗವಾಗಿ ಹೋಗಿ ಏಕ ಏಕಿ ನಿಂತ ಕಾರಣ ಅಪಘಾತವಾಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ನನ್ನ ಪತಿಯೂ ಅಜಾಗರೂಕತೆಯಿಂದ ಬೈಕನ್ನು ಚಾಲನೆ ಮಾಡಿಕೊಂಡು ಹೋಗಿ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಟ್ರಾಕ್ಟರ್ ಮಾಲೀಕ ಮತ್ತು ಚಾಲಕ ನಮಗೆ ಗೊತ್ತಿದ್ದು ಅವರ ಜೊತೆ ಸೇರಿ ಸುಳ್ಳು ಪ್ರಕರಣವನ್ನು ದಾಖಲು ಮಾಡಿಸಿರುತ್ತೇವೆ ಎಂದರೆ ಸರಿಯಲ್ಲ. ಅಪಘಾತದ ಬಗ್ಗೆ ಪೋಲೀಸರು ನನ್ನ ಹೇಳಿಕೆಯನ್ನು ಪಡೆದಿಲ್ಲ ಎಂದರೆ ಸರಿ.

2) ನನ್ನ ಪತಿಗೆ ಅಪಘಾತದ ಕಾಲಕಲ್ಕೆ 40 ವರುಷ ವಯಸ್ಸು ಅಗಿತ್ತು ಎಂದರೆ 33 ವರುಷ ಅಗಿತ್ತು. ನನ್ನ ಪತಿಯು ಬಿ ಡಿ ಡಬ್ಲೂ ಎಸ್ ಎಸ್ ಬಿ ಯಲ್ಲಿ ಗುತ್ತಿಗೆ ಅಧಾರದ ಮೇಲೆ ಕಲಸ ಮಾಡುತ್ತಿದ್ದರು. ಆ ರೀತಿ ಕೆಲಸ ಮಾಡಿ ವೇತನ ಪಡೆಯುಎತ್ತಿದ್ದ ಬಗ್ಗೆ ದಾಖಲೇ ಹಾಜರುಪಡಿಸಿಲ್ಲ ಎಂದರೆ ವೇತನ ಪ್ರಮಾಣಪತ್ರ ಹಾಜರುಪಡಿಸಿರತ್ತೇನೆ. ವೇತನ ಪ್ರಮಾಣಪತ್ರವನ್ನು ಪರಿಹಾರ ಹೆಚ್ಚು ಬರಲಿ ಎಂದು ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಟ್ರಾಕ್ಟರ್ ಗೆ ಡಿಕ್ಕಿಯಾಗಿ ಅಪಘಾತವಗಿದೆ ಎಂದು ಮಳವಳ್ಳಿ ಸರ್ಕಾರಿ ಅಸ್ಪತ್ರೆಯಲ್ಲಿ ಬರೆಸಿದ್ದೇವು ಎಂದರೆ ಸರಿ. ಮಂಡ್ಯ ಅಸ್ಪತ್ರೆಯಲ್ಲಿ ಒಂದು ರಾತ್ರಿ ನನ್ನ ಪತಿಗೆ ಚಿಕಿತ್ಸೆ

ಕೊಡಿಸಿರುತ್ತೇವೆ. ನನ್ನ ಪತಿಯು ಯಾವುದೇ ಕೆಲಸ ಮಾಡುತ್ತಿರಲಿಲ್ಲ ಅದರೂ ಅವರು ಕೆಲಸ ಮಾಡಿ ವೇತನ ಪಡೆಯುತ್ತಿದ್ದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ಕಾರಿ ಅಸ್ಪತ್ರೆಯಿಂದ ಅಂಬ್ಯೂಲೈನ್ಸ ನಲ್ಲಿ ಶವವನ್ನು ತಂದಿರುತ್ತೇನೆ ಎಂದರೆ ಸರಿ. ನಾನು 20 ಸಾವಿರ ಖರ್ಚು ಅಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ  ಸರಿಯಲ್ಲ. ಅವರ ತಿಥಿ ಕಾರ್ಯಕ್ಕೆ 2 ಲಕ್ಷ ಖರ್ಚು ಅಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ  ಸರಿಯಲ್ಲ. ಆ ಸಂಬಂಧವಾಗಿ ದಾಖಲೆ ಇಲ್ಲ ಎಂದರೆ ಸರಿ. ನನ್ನ ಪತಿಯು ಮಾಸಿಕ 25 ಸಾವಿರ ಸಂಪಾದನೆ ಮಾಡುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಪತಿಯ ತಪ್ಪಿನಿಂದ ಅಪಘಾತವಾಗಿದ್ದರೂ ಸಹ 1ನೇ ಎದುರುದಾರರು, ಪೊಲೀಸರು ಮತ್ತು ನಾವು ಸೇರಿ ಸುಳ್ಳು ಪ್ರಕರಣವನ್ನು  ದಾಖಲು ಮಾಡಿಸಿರುತ್ತೇವೆ ಎಂದರೆ ಸರಿಯಲ್ಲ.  ಟ್ರಾಕ್ಟರ್ ಕಬ್ಬಿನ ಲೋಡ್ ನ್ನು ಹಾಕಿಕೊಂಡು ನಿಧಾನವಾಗಿ ಚಲಿಸುತ್ತಿತ್ತು ಎಂದರೆ ಸರಿಯಲ್ಲ. ಪರಿಹಾರ ಹೆಚ್ಚು ಬರಲಿ ಎಂದು ದಾಖಲೆಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಕೆಂಪಮ್ಮ  ಎಂಬುವವರು ನನ್ನ ಅತ್ತೆ ಎಂದರೆ ಸರಿ. ಅವರು ನಮ್ಮ ಕುಟುಂಬವನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು

ಜೆ ಎಂ ಎಫ್ ಸಿ, ಮಳವಳ್ಳಿ.